ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಶಿಸಲಾದರೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE 6/12/2012

# ಸಂಪುಟಕ್ಕೆ 13 ಅಲ್ಲ, 10 ಹೊಸ ಸಚಿವರು

## ಇಂದು ಬೆಳಗ್ಗೆ 10.30ಕ್ಕೆ ನೂತನ ಸಚಿವರ ಪ್ರಮಾಣವಚನ
## ಕುಮಟಳ್ಳಿ ಬಿಟ್ಟು ಎಲ್ಲ 'ಅರ್ಹ' ಶಾಸಕರಿಗೆ ಸಚಿವ ಸ್ಥಾನ
## ಸಿಪಿವೈಗೆ ವಿರೋಧ: ಕತ್ತಿ, ಲಿಂಬಾವಳಿಗೂ ತಪ್ಪಿದ ಹುದ್ದೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಉಪಚುನಾವಣೆಯಲ್ಲಿ ಜಯ ಗಳಿಸಿ ಮಂತ್ರಿ ಸ್ಥಾನ ಪಡೆಯಲು 60 ದಿನಗಳಿಂದ ಕಾಯುತ್ತಿದ್ದ ಅರ್ಹ ಶಾಸಕರು ಗುರುವಾರ ಅಂತೂ ಇಂತೂ ಮುಖ್ಯಮಂತ್ರಿ .ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ ಸಚಿವ ಸಂಪುಟಕ್ಕೆ ಸೇರ್ಪಡೆಯಾಗಲಿದ್ದಾರೆ.

ಬೆಳಗ್ಗೆ 10.30ಕ್ಕೆ ರಾಜಭವನದಲ್ಲಿ ನಡೆಯುವ ಸಮಾರಂಭದಲ್ಲಿ 11 ಅರ್ಹ ಶಾಸಕರ ಪೈಕಿ 10 ಮಂದಿ ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಪಕ್ಷದ ಮೂಲ ಶಾಸಕರ ಪೈಕಿ ಯಾರೊಬ್ಬರೂ ಈ ವೇಳೆ ಸಂಪುಟ ಸೇರುವುದಿಲ್ಲ. ಕೇವಲ ಅನ್ಯ ಪಕ್ಷಗಳಿಂದ ತಮ್ಮ ಸ್ಥಾನಮಾನ ತ್ಯಾಗ ಮಾಡಿ ಬಂದ ಅರ್ಹ ಶಾಸಕರು ಮಾತ್ರ ಈಗ ಸಚಿವರಾಗಲಿದ್ದಾರೆ. » 11

### ಜೂನ್/ಜುಲೈಗೆ ಸಂಪುಟ ಪುನಾರಚನೆ ಸಾಧ್ಯತೆ » 11

### ಹೊಸ ಸಚಿವರು

1 **ರಮೇಶ್ ಜಾರಕಿಹೊಳಿ** (ಗೋಕಾಕ್)
2 **ಆನಂದ ಸಿಂಗ್** (ವಿಜಯನಗರ)
3 **ಬಿ.ಸಿ. ಪಾಟೀಲ್** (ಹಿರೇಕೆರೂರು)
4 **ಶ್ರೀಮಂತ್ ಪಾಟೀಲ** (ಕಾಗವಾಡ)
5 **ಶಿವರಾಂ ಹೆಬ್ಬಾರ್** (ಯಲ್ಲಾಪುರ)
6 **ನಾರಾಯಣಗೌಡ** (ಕೆ.ಆರ್. ಪೇಟೆ)
7 **ಡಾ. ಕೆ. ಸುಧಾಕರ್** (ಚಿಕ್ಕಬಳ್ಳಾಪುರ)
8 **ಎಸ್.ಟಿ. ಸೋಮಶೇಖರ್** (ಯಶವಂತಪುರ)
9 **ಗೋಪಾಲಯ್ಯ** (ಮಹಾಲಕ್ಷ್ಮಿ ಲೇಔಟ್)
10 **ಬೈರತಿ ಬಸವರಾಜು** (ಕೆ.ಆರ್.ಪುರ)

### 8 ಮಂದಿಗೆ ಮೊದಲ ಬಾರಿ ಮಂತ್ರಿಗಿರಿ » 11

### ಈಗ ಹತ್ತೇ ಸಚಿವರೇಕೆ?

- 10 ವಲಸಿಗರು, 3 ಮೂಲ ಬಿಜೆಪಿಗರಿಗೆ ಸಚಿವ ಸ್ಥಾನ ನೀಡುವ ಚಿಂತನೆ ಇತ್ತು
- ಯೋಗೇಶ್ವರ್ ಹೆಸರು ಕೇಳಿಬಂದ ಬಳಿಕ ಪಕ್ಷದಲ್ಲಿ ತೀವ್ರ ಪರ-ವಿರೋಧ ಆಗಿತ್ತು
- ಹಾಗಾಗಿ, ಗೊಂದಲ ಬೇಡವೆಂದು ಉಪಚುನಾವಣೆ ಗೆದ್ದವರಿಗಷ್ಟೇ ಮಂತ್ರಿಗಿರಿ

### ಹೈಕಮಾಂಡ್ ಜೊತೆ ಚರ್ಚಿಸಿ ಖಾತೆ ಹಂಚಿಕೆ?

ಮುಂದಿನ ವಾರ ಮುಖ್ಯಮಂತ್ರಿ ಯಡಿಯೂರಪ್ಪ ದೆಹಲಿಗೆ ತೆರಳುತ್ತಿದ್ದು, ವರಿಷ್ಠರ ಜೊತೆ ಚರ್ಚಿಸಿ ಖಾತೆ ಹಂಚಿಕೆ ಅಂತಿಮಗೊಳಿಸುವ ನಿರೀಕ್ಷೆ ಇದೆ. ವಿವರ » 11

# ಸಂಪುಟಕ್ಕೆ 13 ಅಲ್ಲ, 10 ಹೊಸ ಸಚಿವರು

6/2/2020

3ನೇ ಪುಟದಿಂದ

ಬಿಜೆಪಿಯ ಮೂಲ ಶಾಸಕರಾದ ಉಮೇಶ್ ಕತ್ತಿ, ಅರವಿಂದ ಲಿಂಬಾವಳಿ ಹಾಗೂ ಮಾಜಿ ಶಾಸಕ ಸಿ.ಪಿ. ಯೋಗೇಶ್ವರ್ ಅವರ ಹೆಸರುಗಳನ್ನು ಸಂಪುಟ 'ಸೇರ್ಪಡೆ'ಯಿಂದ ಕೈಬಿಡಲಾಗಿದೆ. ಕಳೆದ ಚುನಾವಣೆಯಲ್ಲಿ ಸೋತಿರುವ ಯೋಗೇಶ್ವರ್ ಅವರಿಗೆ ಸಚಿವ ಸ್ಥಾನ ನೀಡುವುದಕ್ಕೆ ಪಕ್ಷದ ಹಲವು ಶಾಸಕರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದರು. ಅಂತಿಮವಾಗಿ ಆ ಶಾಸಕರ ಅಸಮಾಧಾನ ಪರಿಗಣಿಸಿದ್ದು, ಅನ್ಯ ಪಕ್ಷಗಳಿಂದ ಬಂದವರಿಗೆ ಮಾತ್ರ ಸಚಿವ ಸ್ಥಾನ ನೀಡುವುದಕ್ಕೆ ತೀರ್ಮಾನ ಕೈಗೊಳ್ಳಲಾಗಿದೆ.



ಇನ್ನೇನು ಪ್ರಮಾಣವಚನ ಸ್ವೀಕರಿಸುವ ನಿರೀಕ್ಷೆಯಲ್ಲಿದ್ದ ಕತ್ತಿ ಮತ್ತು ಲಿಂಬಾವಳಿ ಅವರಿಗೆ, ಯೋಗೇಶ್ವರ್‌ಗೆ ಎದುರಾದ ವಿರೋಧದ ಹಿನ್ನೆಲೆಯಲ್ಲಿ ಕೊನೆ ಕ್ಷಣದಲ್ಲಿ ಸಚಿವ ಸ್ಥಾನ ತಪ್ಪಿದಂತಾಗಿದೆ.

ಶನಿವಾರ ದೆಹಲಿ ವಿಧಾನಸಭಾ ಚುನಾವಣೆಯ ಮತದಾನ ಇರುವುದರಿಂದ ಮತ್ತು ಪಕ್ಷಕ್ಕೆ ಅದು ಮಹತ್ವದ್ದಾಗಿರುವುದರಿಂದ ಕರ್ನಾಟಕದಲ್ಲಿನ ಗೊಂದಲಗಳ ಪರಿಣಾಮ ದೆಹಲಿ ಚುನಾವಣೆಯ ಮೇಲೂ ಬೀರಬಾರದು ಎಂಬ ಉದ್ದೇಶದಿಂದ ಸದ್ಯಕ್ಕೆ ಪಕ್ಷದ ಮೂಲ ಶಾಸಕರ ಪೈಕಿ ಯಾರೊಬ್ಬರಿಗೂ ಸಚಿವ ಸ್ಥಾನ ನೀಡುವುದು ಬೇಡ ಎಂಬ ಸೂಚನೆಯನ್ನು ವರಿಷ್ಠರು ಗುರುವಾರ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ರವಾನಿಸಿದರು. ಬಳಿಕ ಸಂಜೆ ಕಲಬುರ್ಗಿಯಿಂದ ವಾಪಸಾದ ಯಡಿಯೂರಪ್ಪ ಅವರು ಸಚಿವ ಸ್ಥಾನದ ಆಕಾಂಕ್ಷಿಗಳಾಗಿದ್ದ ಪಕ್ಷದ ಮೂಲ ಶಾಸಕರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡು ಮಾತುಕತೆ ನಡೆಸಿದ ಬಳಿಕ ಅನ್ಯ ಪಕ್ಷಗಳಿಂದ ಬಂದಿರುವ ಹತ್ತು ಮಂದಿ ಶಾಸಕರಿಗೆ ಮಾತ್ರ ಸಚಿವ ಸ್ಥಾನ ನೀಡುವ ನಿರ್ಧಾರ ಪ್ರಕಟಿಸಿದರು.

ಹಿಂದಿನ ಜೆಡಿಎಸ್ ಮತ್ತು ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರದ ಪತನಕ್ಕೆ ಮುನ್ನುಡಿ ಬರೆದಿದ್ದ ರಮೇಶ್ ಜಾರಕಿಹೊಳಿ, ಆನಂದ್ ಸಿಂಗ್, ಎಸ್.ಟಿ.ಸೋಮಶೇಖರ್, ಬೈರತಿ ಬಸವರಾಜು, ನಾರಾಯಣಗೌಡ, ಡಾ.ಕೆ.ಸುಧಾಕರ್, ಬಿ.ಸಿ.ಪಾಟೀಲ್, ಶ್ರೀಮಂತ ಪಾಟೀಲ್, ಶಿವರಾಂ ಹೆಬ್ಬಾರ್, ಕೆ.ಗೋಪಾಲಯ್ಯ ಅವರು ಸಚಿವರಾಗಿ ಪ್ರಮಾಣ ಸ್ವೀಕರಿಸಲಿದ್ದಾರೆ.

ಅನರ್ಹ ಶಾಸಕರ ಪೈಕಿ ಮಹೇಶ್ ಕುಮಟಳ್ಳಿ ಅವರೊಬ್ಬರು ಸಚಿವ ಸ್ಥಾನದಿಂದ ವಂಚಿತರಾಗಿದ್ದಾರೆ. ಬುಧವಾರ ಸಂಜೆವರೆಗೂ ಕುಮಟಳ್ಳಿ ಅವರು ತಮಗೆ ಸಂಪುಟದಲ್ಲಿ ಅವಕಾಶ ಸಿಗಬಹುದು ಎಂಬ ನಿರೀಕ್ಷೆಯಲ್ಲಿದ್ದರು. ಕುಮಟಳ್ಳಿ ಅವರಿಗೆ ಸೂಕ್ತ ಸ್ಥಾನಮಾನ ನೀಡುವುದಾಗಿ ಖುದ್ದು ಮುಖ್ಯಮಂತ್ರಿ ಯಡಿಯೂರಪ್ಪ ತಿಳಿಸಿದ್ದಾರೆ.



ಹೈಕಮಾಂಡ್ ಸೂಚನೆ ಮೇರೆಗೆ ಅನ್ಯ ಪಕ್ಷಗಳಿಂದ ನಮ್ಮ ಪಕ್ಷಕ್ಕೆ ಬಂದಿರುವ 10 ಮಂದಿ ಶಾಸಕರು ಗುರುವಾರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಮಹೇಶ್ ಕುಮಟಳ್ಳಿ ಅವರಿಗೆ ದೊಡ್ಡ ಸ್ಥಾನಮಾನ ನೀಡಲು ಪ್ರಯತ್ನಿಸುವೆ. ಉಳಿದವರ ಸೇರ್ಪಡೆ ಬಗ್ಗೆ ಮಾತುಕತೆ ನಡೆಸಲು ದೆಹಲಿಗೆ ಬರುವಂತೆ ವರಿಷ್ಠರು ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಉಮೇಶ್ ಕತ್ತಿ ಅವರಿಗೆ ಸಚಿವ ಸ್ಥಾನ ನಿಶ್ಚಿತವಾಗಿ ಸಿಗಲಿದೆ.

– ಬಿ.ಎಸ್.ಯಡಿಯೂರಪ್ಪ